**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>SC.146/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಉಮೇಶ |
| ತಂದೆಯ ಹೆಸರು | : | ರಂಗಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಗ್ರಾಮ ಸೇವಕ, ಅಣಬೇರು |
| ವಾಸ ಸ್ಥಳ | : | ಅಣಬೇರು |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 3

ದಿ: 29-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>**:

1. ನಾನು 05 ವರ್ಷಗಳಿಂದ ಗ್ರಾಮ ಸೇವಕ ಅಂತ ಅಣಬೇರು ಗ್ರಾಮದಲ್ಲಿಕೆಲಸ ಮಾಡುತ್ತಿದ್ದೇನೆ. ಆಗ ಚಾಸಾ-7 ರವರು ಗ್ರಾಮ ಲೆಕ್ಕಾಧಿಕಾರಿಗಳು ಆಗಿದ್ದರು.

2. ಈಗ ನನಗೆ ತೋರಿಸಿದ ನಿಪಿ-1 ರಲ್ಲಿ ನನ್ನ ಸಹಿಯನ್ನು ನೋಡಿ ನಿಪಿ-1(ಸಿ) ಅಂತ ಗುರುತಿಸುತ್ತೇನೆ. ಗುರ್ಜಿಕೊಂಡ ಗ್ರಾಮದ ಸರ್ವೇ ನಂಬರ 13 ರಲ್ಲಿರುವ ಕಲ್ಲು ಕ್ವಾರಿ ಸ್ಥಳದಲ್ಲಿ ನಿಪಿ-1 ಕ್ಕೆ ದಿಃ 04-03-2021 ರಂದು ಸಹಿ ಮಾಡಿದ್ದೇನೆ. ನನ್ನೊಂದಿಗೆ ಚಾಸಾ-2, 7 ರವರು ಮಾಡಿದ್ದಾರೆ.

3. ದಿಃ 04-03-2021 ರಂದು ನನ್ನನ್ನು ಮತ್ತು ಚಾಸಾ-2 ರವರನ್ನು ಮಾಯಾಕೊಂಡ ಪೊಲೀಸರು ಕರೆಸಿದ್ದರು. ಆ ಸ್ಥಳದಲ್ಲಿ ಡಿ.ವೈ.ಎಸ್.ಪಿ. ಮತ್ತು ಇತರ ಪೊಲೀಸರು ಇದ್ದರು. ಆ ಸ್ಥಳದಲ್ಲಿ ಕಲ್ಲು ಬ್ಲಾಷ್ಟ ಮಾಡುವ ಸ್ಥಳ ಅಂತ ನೋಡಿದೆವು. ಅಲ್ಲಿ ಕಾರ್ತಿಕ ಎಂಬುವವರು ಇದ್ದರು. ಆಗ ಮಧ್ಯಾಹ್ನ

3.00 ಗಂಟೆ ಆಗಿತ್ತು. ನಮ್ಮನ್ನು ಪೊಲೀಸರ ಇಲಾಖೆಯ ಜೀಪಿನಲ್ಲಿ ಕರೆದುಕೊಂಡು ಹೋಗಿದ್ದರು. ಅಲ್ಲಿ ಕಾರ್ತಿಕರವರು ಕಲ್ಲು ಕ್ವಾರಿ ಮಾಡುತ್ತಿದ್ದರು. ಅದರ ಬಗ್ಗೆವಿಚಾರಿಸಿದರು. ಆಗ ಅವರು 1 ನೇ ಆರೋಪಿಯು ಕಲ್ಲು ಕ್ವಾರಿಯನ್ನು ನಡೆಸುತ್ತಿರುವುದು ಅಂತ ತಿಳಿಸಿದರು. ದೊಡ್ಡ ಮತ್ತು ಸಣ್ಣ ಸುತ್ತಿಗೆಗಳು, ಮದ್ದು, ವೈರ್, ಉಪ್ಪಿನ ತರಹದ ಪದಾರ್ಥ, ರಾಡ್ ಗಳು, ಟ್ರ್ಯಾಕ್ಟರ್ ಇದ್ದವು. ಕಾರ್ತಿಕರವರು 04 ಸಣ್ಣ ಸಣ್ಣ ರೂಮ್ ಗಳಿಗೆ ನಮ್ಮನ್ನು ಕರೆದುಕೊಂಡರು. ಅಲ್ಲಿ ಪೆಟ್ಟಿಗೆಯಲ್ಲಿ ಮದ್ದುಗಳು ಇದ್ದವು. ಮದ್ದಗಳನ್ನು ಬಳಿಸಿ ಕಲ್ಲು ಒಡೆಯುತ್ತಾರೆ ಅಂತ ತಿಳಿಸಿದರು. ಅದರ ಬಾಬ್ತು ಪೊಲೀಸರು  ತನಿಖೆ ಮಾಡಿದರು. ಅವುಗಳನ್ನು ಪೊಲೀಸರು ಜೀಪಿನಲ್ಲಿ ತೆಗೆದುಕೊಂಡು ಹೋದರು. ಆ ಸ್ಥಳದಲ್ಲಿ ಮಧ್ಯಾಹ್ನ 3.30 ರಿಂದ 5.30 ಗಂಟೆಯುವರೆಗೆ ಮಹಜರ ಮಾಡಿದರು. ಅವುಗಳನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ.ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 10 ಅಂತ ಗುರುತಿಸಲಾಗಿದೆ. ಮಹಜರ ಮಾಡುವ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತಾರೆ. ನನಗೆ ಈಗ ತೋರಿಸಿದ ನಿಪಿ-3 ರಲ್ಲಿ ನಾನು, 2 ನೇ ಆರೋಪಿ, ಡಿವೈ.ಎಸ್.ಪಿ. ರವರು, ತನಿಖಾಧಿಕಾರಿಗಳು, ಚಾಸಾ-2, 7 ರವರು ಇದ್ದೇವೆ. ನಿಪಿ-3 ರಲ್ಲಿ ಗುರ್ಜಿಕೊಂಡ ಸರ್ವೇ ನಂಬರ 13 ರಲ್ಲಿರುವ ಕಲ್ಲು ಕ್ವಾರಿ ಕಂಡು ಬರುತ್ತದೆ. ನಿಪಿ-4 ರಲ್ಲಿ ಮೀಟರ್, ವೈರ್ ಮತ್ತು ಇತರೆ ಸಾಮಾಗ್ರಿಗಳು ಕಂಡು ಬರುತ್ತವೆ. ಅವುಗಳನ್ನು ಪೊಲೀಸರು  ವಶಪಡಿಸಿಕೊಂಡಿರುತ್ತಾರೆ. ನಿಪಿ-5 ರಲ್ಲಿ ಕಂಡು ಬರುವ ಸಾಮಾಗ್ರಿಗಳು ಮು.ಮಾ.1 ರಿಂದ 10 ಇರುತ್ತವೆ. ನಿಪಿ-6 ರಲ್ಲಿ ಟ್ರ್ಯಾಕ್ಟರ್ ಕಂಡು ಬರುತ್ತದೆ. ನಿಪಿ-7 ರಲ್ಲಿ ಶಡ್ ಗಳು ಕಂಡು ಬರುತ್ತವೆ. ಆ ರೂಮ್ ಗಳಲ್ಲಿ ಸ್ಪೋಟಕ ವಸ್ತುಗಳು ಕಂಡು ಬರುತ್ತವೆ. ನಿಪಿ-8 ಮತ್ತು 9 ರಲ್ಲಿ ಶಡಗಳಲ್ಲಿ ವಸ್ತುಗಳನ್ನು ಸಂಗ್ರಹಿಸಿ ಇಟ್ಟಿರುವುದು ಕಂಡು ಬರುತ್ತದೆ. ಈಗ ತೋರಿಸಿದ ನಿಪಿ-10 ರಶೀದಿ ಪುಸ್ತಕವನ್ನು ನಮ್ಮ ಸಮಕ್ಷಮ ವಶಪಡಿಸಿಕೊಂಡರು.

4. ಈಗ ನನಗೆ ತೋರಿಸಿದ ನಿಪಿ-2 ರ ಕಚ್ಚಾ ನಕಾಶೆಯಲ್ಲಿ ನನ್ನ ಸಹಿಯನ್ನು ನಿಪಿ-2(ಸಿ) ಅಂತ ಗುರುತಿಸುತ್ತೇನೆ. ಮುದ್ದೆಮಾಲುಗಳನ್ನು ಪೊಲೀಸರು ಪೊಲೀಸ್ ಠಾಣೆಗೆ ತೆಗೆದುಕೊಂಡು

ಹೋದರು. 2 ನೇ ಆರೋಪಿಯನ್ನು ಸಹ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಆ ದಿನ ಸ್ಥಳದಲ್ಲಿ ಇದ್ದಂಹತ ಮತ್ತು ಸ್ಥಳವನ್ನು ತೋರಿಸಿದಂತಹ 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (2 ನೇ ಆರೋಪಿಯು ಈ ದಿನ ಗೈರು ಹಾಜರಾಗಿದ್ದು, ಆತನನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಅಂತ ಅರ್ಜಿ ಸಲ್ಲಿಸಿರುತ್ತಾರೆ.)

**ಪಾಟೀ ಸವಾಲುಃ ಶ್ರೀ ಬಿ.ಬಿ.ಆರ್., ವಕೀಲರಿಂದ ಆರೋಪಿತರ ಪರವಾಗಿ**:

5. ನನಗೆ ಓದಲು ಬರೆಯಲು ಬರುವುದಿಲ್ಲ. ಪೊಲೀಸರು ಓದಿ ಹೇಳಿದ ನಂತರ ನಾನು ನಿಪಿ-2 ಕ್ಕೆ ಸಹಿ ಮಾಡಿದ್ದೇನೆ. ರಂಗಸ್ವಾಮಿಯವರು ನಿಪಿ-2 ರಲ್ಲಿ ಸಹಿ ಮಾಡಿಲ್ಲ. ನನ್ನ ಜನನ ದಿನಾಂಕ ನೆನಪಿಲ್ಲ. ಆದ್ದರಿಂದ ದಿಃ 04-03-2021 ಹೇಗೆ ನೆನಪಿಟ್ಟುಕೊಂಡಿದ್ದೀರಾ ಅಂದರೆ ಆ ದಿನ ನಾವು ಹೋಗಿದ್ದೆವು. ಮು.ಮಾ.1 ರಿಂದ 10 ಕ್ವಾರಿಯ ರೂಮುಗಳಲ್ಲಿ ಇದ್ದವು. ಆ ದಿನ ನಾವು ಸ್ಥಳಕ್ಕೆ ಹೋದಾಗ ಕಾರ್ತಿಕ ಇದ್ದರು. ಅವರು ಕಲ್ಲು ಕ್ವಾರಿಯ ಹತ್ತಿರ ಇದ್ದರು. ಅವರು ಸುಮ್ಮನೆ ಕುಳಿತುಕೊಂಡಿದ್ದರು. ನಿಪಿ-2 ರಲ್ಲಿ ದಾದಾಪೀರರವರದ್ದು ಕಲ್ಲಿನ ಕ್ವಾರಿ ಅಂತ ರೌಂಡ್ ಆಗಿದೆ ಅಂದರೆ ನನಗೆ ಗೊತ್ತಿಲ್ಲ. ಆ ಮನೆಗಳು ಯಾರಿಗೆ ಸೇರಿವೆ ಅಂತ ನನಗೆ ಗೊತ್ತಿಲ್ಲ. ಮು.ಮಾ.1 ರಿಂದ 10 ರೂಮ್ ನಲ್ಲಿದ್ದವು ಅವುಗಳನ್ನು ವಶಪಡಿಸಿಕೊಂಡರು. ಆ ಮುದ್ದೆ ಮಾಲುಗಳಿಗೆ ಚೀಟಿ ಅಂಟಿಸಿ ಸಹಿ ಪಡೆದುಕೊಂಡಿಲ್ಲ. ಆ ಟ್ರ್ಯಾಕ್ಟರ್ ನಂಬರ ನನಗೆ ನೆನಪಿಲ್ಲ. ಪೊಲೀಸರು ಅಲ್ಲಿ ನಮಗೆ ಬರಲು ಹೇಳಿದರು ಅದಕ್ಕೆ ನಾವು ಹೋದೆವು ಅಂದರೆ ನಿಜ. ಅಲ್ಲಿ ನಾವುಇದ್ದು, ಪೊಲೀಸರು ಪೋಟೋಕಕ್ಷ್ ಬನ್ನಿ ಅಂತ ಹೇಳಿದರು ಅದಕ್ಕೆ ಹೋದೆವುಅಂದರೆ ಅಲ್ಲಿ ಬ್ಲಾಷ್ಟ ಮಾಡುತ್ತಿರುವ ಬಗ್ಗೆ ತೆಗೆದಿರುತ್ತಾರೆ. ಪೋಟೋಗಳನ್ನು ಯಾಕೆ ತೆಗೆದರು ಅಂತ ನನಗೆ ಗೊತ್ತಿಲ್ಲ. ಪೊಲೀಸರು ನಮಗೆ ಸ್ಥಳದಲ್ಲಿ ನೋಟಿಸ್ಸು ಕೊಟ್ಟು ಸ್ಥಳದಲ್ಲಿ ಸಹಿ ಪಡೆದುಕೊಂಡರು. ನನಗೆ ಏನೂ ಗೊತ್ತಿಲ್ಲ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.